ರೂ. ಕೊಟ್ಟೆ. ಅದನ್ನು ಪಡಕೊಂಡು ಸಂತೋಷದಿಂದ ನಿರ್ಗಮಿಸಿದ. ಅದರ ಮರುದಿನವೂ ಬಂದ. ನಿನ್ನೆಯ ಕರಾರಿನಂತೆ ಎಣ್ಣೆ ತಿಕ್ಕಿದ್ದಕ್ಕೆ ನಾನು ಅವನಿಗೆ ದುಡ್ಡು ಕೊಡಲಿಲ್ಲ. 'ಬೀಡಿಯ ದುಡ್ಡು 20 ರೂ. ಕೊಡಿ' ಅಂಗಲಾಚಿದ. 'ಇಲ್ಲ, ನಾನು ಇಂದು ಒಂದು ಪೈಸೆಯನ್ನೂ ಕೊಡುವುದಿಲ್ಲ. ಇಂದಿಗೆ ಎಣ್ಣೆ ಉಜ್ಜಿದ್ದು ಸಾಕು. ನಾಳೆಯಿಂದ ಬರಬೇಡ' ಎಂದು ಧ್ವನಿ ಎತ್ತರಿಸಿ ಹೇಳಿದೆ. ಸಪ್ಪೆ ಮೋರೆ ಮಾಡಿ ತಲೆ ತುರಿಸುತ್ತಾ ನಿಂತ. ಕದಲಲಿಲ್ಲ. ಪಾಪ ಅನಿಸಿ ಅವನು ಕೇಳಿದ ದುಡ್ಡು ಕೊಟ್ಟು ಕಳಿಸಿದೆ.

ಮಾಂಕುವಿನ ಎಣ್ಣೆ ಮಾಲೀಸಿಗೆ ನನ್ನ ಮಂಡಿ ಬಗ್ಗಲಿಲ್ಲ. ನೋವು ಮತ್ತೂ ಹೆಚ್ಚಿತು. ಎಷ್ಟೆಂದರೆ ದೊಣ್ಣೆ ಹಿಡಿಯುವಷ್ಟು. ಅದ್ಹೇಗೋ ನನ್ನ ಮಂಡಿನೋವಿನ ವಿಷಯ ಊರಿಡೀ ಹಬ್ಬಿತು. ಎಲ್ಲರೂ ನನ್ನನ್ನು ನೋಡಲು ಬರುವವರೇ. ಪಾದರಸದಂತೆ ಚುರುಕಾಗಿ ಓಡಾಡುವ ನಾನು ಈಗ ಮೂಲೆ ಹಿಡಿದು ಕುಳಿತಿರುವುದನ್ನು ನೋಡಿ ಎಲ್ಲರೂ ಮರುಕ ವ್ಯಕ್ತ ಪಡಿಸುವವರೇ. ಒಬ್ಬೊಬ್ಬರು ಒಂದೊಂದು ಮದ್ದು ಹೇಳುತ್ತಿದ್ದರು. 'ನೆಕ್ಕಿಸೊಪ್ಪನ್ನು ಕಾಲು ಚಮಚ ಸಾಸಿವೆ ಸೇರಿಸಿ ನುಣ್ಣಗೆ ಅರೆದು 10 ದಿನ ಲೇಪ ಹಾಕಿದರೆ ಖಂಡಿತ ವಾಸಿಯಾಗುತ್ತದೆ' ಎಂದು ಹೇಳಿದರು ಬಂದವರಲ್ಲಿ ಒಬ್ಬರು. ಕಾಳುಮೆಣಸಿನ ಎಲೆಗೆ ಎಣ್ಣೆ ಸವರಿ ಕೆಂಡಕ್ಕೆ ಹಾಕಿ ಬಿಸಿ ಮಾಡಿ ಆ ಬಿಸಿಬಿಸಿ ಎಲೆಯನ್ನು ನೋವಿರುವ ಜಾಗಕ್ಕೆ ಒತ್ತಿ ಹಿಡಿದರೆ ಗುಣವಾಗುವುದರಲ್ಲಿ ಸಂಶಯವಿಲ್ಲ' ಎಂದರು ಮತ್ತೊಬ್ಬರು. 'ಧಾರೆಹುಳಿ ಹಣ್ಣಿನ ರಸ ತೆಗೆದು, ಅಷ್ಟೇ ಪ್ರಮಾಣದ ತೆಂಗಿನೆಣ್ಣೆ ಸೇರಿಸಿ ಕಾಯಿಸಿ ಹಚ್ಚಿದರೆ ನೋವು ಮಂಗಮಾಯ' ಎಂದರು ಇನ್ನೊಬ್ಬರು. ಎಲ್ಲವನ್ನೂ ಮಾಡಿದೆ. ಎಳ್ಳಷ್ಟೂ ಗುಣ ಕಾಣಲಿಲ್ಲ.

ಪ್ರವಾಸ ಎಂದರೆ ನನಗೆ ಪ್ರಾಣ. ಪ್ರವಾಸದಲ್ಲಿ ಆಯಾಸ, ಬಳಲಿಕೆ ಎಂದೂ ನನ್ನನ್ನು ಕಾಡಿದ್ದಿಲ್ಲ. ಪ್ರವಾಸ ಹೋಗುವ ಸಂದರ್ಭ ಒದಗಿ ಬಂದರೆ, ಗಂಡನ ಒಪ್ಪಿಗೆ ಸಿಕ್ಕರೆ ನಾನು ಒಬ್ಬಳೇ ಆದರೂ ಗುರುತು–ಪರಿಚಯವಿಲ್ಲದ ಊರಿಗೂ ಹೊರಡುವವಳೇ. ದೂರದ ಪ್ರವಾಸಕ್ಕೂ ನನಗೆ ಜೊತೆಗಾರರು ಬೇಕೆಂದು ಇಲ್ಲ. ಮನೆಯ ಸಮೀಪದ ಪೇಟೆಗೆ ಹೋಗುವುದನ್ನೂ ನಾನು ಆನಂದಿಸುತ್ತೇನೆ. ನನ್ನ ಈ ಪ್ರವಾಸಪ್ರೇಮಕ್ಕೆ ಮಕ್ಕಳು, 'ನೀನು ಬಸ್ ಕಂಡಕ್ಟರ್ ಆಗಬೇಕಿತ್ತು. ಆಗ ದಿನಾ ನಿನಗೆ ಹೋಗಲು ಸಿಗುತ್ತಿತ್ತು' ಎಂದು ಆಗಾಗ ನನಗೆ ತಮಾಷೆ ಮಾಡುವುದಿದೆ. ಈಗ ರೆಕ್ಕೆ ಮುರಿದ ಹಕ್ಕಿಯ ಹಾಗೆ ಮನೆಯೊಳಗೆ ಬಿದ್ದುಕೊಂಡಿರುವ ನನ್ನ ಪಾಡು ನೋಡಿ ನನಗಿಂತ ಹೆಚ್ಚು ದುಃಖ ಅನುಭವಿಸಿದ್ದು ನನ್ನ ಗಂಡ, ಮಕ್ಕಳು.

ದೊಣ್ಣೆ ಹಿಡಿಯುವ ವಯಸ್ಸು ನನ್ನದಲ್ಲ. ಬದುಕಿದಷ್ಟು ಸಮಯ ಬದುಕಲು ಇದೆ. 50ಕ್ಕೆ ಕಾಲಿಡುತ್ತಿದ್ದೇನಷ್ಟೆ. ಈಗಲೇ ಹೀಗಾದರೆ ಮುಂದಿನ ಸುದೀರ್ಘ ಜೀವನವನ್ನು ಹೇಗೆ ಕಳೆಯುವುದು? ಇದು ವಂಶಪಾರಂಪರ್ಯದ ನೋವಂತೂ ಅಲ್ಲ. ಏಕೆಂದರೆ, 72 ವರ್ಷದ ನನ್ನ ಅಮ್ಮ ಒಂದು ದಿನವೂ ಮಂಡಿನೋವೆಂದು ಕುಳಿತವರಲ್ಲ. ಈ ವಯಸ್ಸಲ್ಲೂ ಇಡೀ ತೋಟ ಅಡ್ಡಾಡಿ ಅಡಿಕೆ, ತೆಂಗಿನಕಾಯಿ ಹೆಕ್ಕುತ್ತಾರೆ. 83 ವರ್ಷದ ನನ್ನ ಅಪ್ಪ ತೋಟದಿಂದ ಕೋಕೊ ಕಾಯಿ ಕೊಯ್ದು ಹೆಗಲಲ್ಲಿ ಹೊತ್ತುಕೊಂಡು ತರುತ್ತಾರೆ. ಹಾಗಾದರೆ, ಈಗಲೇ ನನಗೆ ಈ ನೋವು ಹೇಗೆ ಬಂತು? ಎಂದು ಚಿಂತಾಕ್ರಾಂತಳಾದೆ. 'ಇನ್ನು ಹೀಗೇ ಕುಳಿತರಾಗದು. ಏನಾಗಿದೆ ಎಂದು ಡಾಕ್ಟರರಿಗೆ ತೋರಿಸೋಣ' ಎಂದರು ಗಂಡ. ನನ್ನ ಕೈಹಿಡಿದು ನಡೆಸಿ ಜೀಪಿನಲ್ಲಿ ಕುಳ್ಳಿರಿಸಿ ಸುಳ್ಯದ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋದರು. ಡಾಕ್ಟರರು ಕಾಲನ್ನು ಪರೀಕ್ಷೆ ಮಾಡಿ 'ಎಕ್ಸರೇ ತೆಗೆಸಿ ಬನ್ನಿ' ಎಂದು ಚೀಟಿ ಬರೆದುಕೊಟ್ಟರು. ಅದರಂತೆ ಎಕ್ಸರೇ ತೆಗೆಸಿದೆವು.

ಎಕ್ಸರೇ ನೋಡಿದ ಅವರು, 'ಇದರಲ್ಲೇನೂ ಕಾಣುವುದಿಲ್ಲ. ಬೆನ್ನು ಮೂಳೆಯ ತೊಂದರೆ ಇರಲೂ ಬಹುದು. ಸರಿಯಾಗಿ ಗೊತ್ತಾಗಬೇಕಾದರೆ ಎಮ್‌ಆರ್‌ಐ ಸ್ಕ್ಯಾನಿಂಗ್ ಮಾಡಬೇಕು. ಈಗ ಈ ಮಾತ್ರೆಗಳನ್ನು ತಿನ್ನಿ' ಎಂದು ಒಂದಷ್ಟು ಮಾತ್ರೆ ಬರೆದುಕೊಟ್ಟರು. ಎಮ್‌ಆರ್‌ಐ ಹೆಸರು ಕೇಳಿದೊಡನೆ ನಾನು ನಡುಗಿಬಿಟ್ಟೆ. ಅಂತಹದ್ದೇನೂ ಇರಲಾರದು ಎಂದಿತು ಮನಸ್ಸು. ಅವರು ಬರೆದುಕೊಟ್ಟ ಮಾತ್ರೆಗಳು ಅಲ್ಲಿ ಇರಲಿಲ್ಲ. ಹೊರಗಿನಿಂದ ತಂದೆವು. ಸರ್ಕಾರಿ ಆಸ್ಪತ್ರೆ ಆದರೂ 2,500 ರೂಪಾಯಿ ಖರ್ಚಾಯಿತು.

ಅವರು ಕೊಟ್ಟ ಮಾತ್ರೆಗಳನ್ನೆಲ್ಲ ತಿಂದದ್ದಾಯಿತು.